ಎರಡು ವರ್ಷಗಳ ಹಿಂದೆ ರಿಯಾಲಿಟಿ ಷೋಗಳ ಸುವರ್ಣಯುಗ ಚಾಲ್ತಿಯಲ್ಲಿತ್ತು ಎಂದು ನನಗನ್ನಿಸುತ್ತದೆ. 2003ರಿಂದ 2015ರ ತನಕ ಅದರ ಕೊಯ್ಲು ಭಯಂಕರವಾಗಿತ್ತು. ಜನಪ್ರಿಯತೆ ಆ ಮಟ್ಟಗಿತ್ತು. ಈಗ ಎದುರಾಗಿರುವ ಮಾರುಕಟ್ಟೆಯ ಪೈಪೋಟಿ ಬೇರೆ ಬೇರೆ ಹೊಸ ಸವಾಲುಗಳನ್ನು ಎದುರಿಸುವಂತೆ ಮಾಡಿದೆ. ಒಂದು ಕಡೆ ಮನರಂಜನಾ ವಾಹಿನಿಗಳಿಗೆ ಸುದ್ದಿವಾಹಿನಿಗಳು ಸ್ಪರ್ಧಿಯಾಗಿವೆ. ಮತ್ತೊಂದೆಡೆ ಇವೆರಡಕ್ಕೂ ಬಲವಾದ ಸ್ಪರ್ಧೆಯನ್ನು ಸಾಮಾಜಿಕ ಮಾಧ್ಯಮ ನೀಡುತ್ತಿದೆ. ಫಿಕ್ಷನ್–ನಾನ್‌ಫಿಕ್ಷನ್‌ಗಳ ನಡುವಿನ ಆಯವ್ಯಯದ ಲೆಕ್ಕಾಚಾರ ನೋಡಿದರೆ ರಿಯಾಲಿಟಿ ಷೋಗಳ ಖರ್ಚುವೆಚ್ಚ ಅಧಿಕ. ಆದರೆ ಅವು ಜನಪ್ರಿಯ

–ಸಾಯಿ ಪ್ರಸಾದ್
ಸ್ಟಾರ್ ಸುವರ್ಣ ಮುಖ್ಯಸ್ಥ





ಷೋಗಳು ಅಲ್ಪಸ್ವಲ್ಪ ಬದಲಾವಣೆಯನ್ನು ಹೊಂದುವುದರೊಂದಿಗೆ ತಮ್ಮದೇ ಆದ ವೀಕ್ಷಕವಲಯವೊಂದನ್ನು ಸೃಷ್ಟಿಸಿಕೊಂಡಿವೆ.

'ಕಲರ್ಸ್' ವಾಹಿನಿ ಹಲವಾರು ಹೊಸ ಹೊಸ ರಿಯಾಲಿಟಿ ಷೋಗಳ ಶೋಧವನ್ನು ನಿರಂತರ ಮಾಡುತ್ತಲೇ ಇದೆ. ಜಾಗತಿಕವಾಗಿ ಹೆಸರಾದ 'ಬಿಗ್‌ಬಾಸ್' ಕಾರ್ಯಕ್ರಮಕ್ಕೆ ಕನ್ನಡದಲ್ಲಿ ಗಟ್ಟಿ ನೆಲೆ ತಂದುಕೊಟ್ಟಿದ್ದು 'ಕಲರ್ಸ್'. ಅದೀಗ ಸೀಸನ್ 6ನ್ನು ಯಶಸ್ವಿಯಾಗಿ ಪೂರೈಸಿದೆ. ಒಮ್ಮೆ ಮಾತ್ರ ಸುವರ್ಣದಲ್ಲಿ ಬಂದಿದ್ದು ಬಿಟ್ಟರೆ 'ಬಿಗ್ ಬಾಸ್'ನ 5 ಸೀಸನ್‌ಗಳಿಗೆ ಕಲರ್ಸ್ ವೇದಿಕೆಯಾಗಿದೆ.

ಯುವಕ–ಯುವತಿಯರ ಬುದ್ಧಿವಂತಿಕೆ, ಮಾನಸಿಕ ದೃಢತೆಗೆ, ವ್ಯಕ್ತಿತ್ವದ ಶೋಧಕ್ಕೆ 'ಕಲರ್ಸ್ ವಾಹಿನಿ' ರೂಪಿಸಿದ 'ಸೂಪರ್ ಮಿನಿಟ್' ಆರಂಭದಲ್ಲಿ ಅದ್ಭುತ ಅನ್ನಿಸಿತ್ತು. ಇದೇ ವಾಹಿನಿಯ 'ಡಾನ್ಸಿಂಗ್ ಸ್ಟಾರ್' ಸರಣಿಯಲ್ಲಿ ಹಲವು ಪ್ರತಿಭಾವಂತರು ನಾಡಿಗೆ ಪರಿಚಯಗೊಂಡಿದ್ದಾರೆ.

ಉದಯ ವಾಹಿನಿಯಲ್ಲಿ 'ಕಿಕ್' ರಿಯಾಲಿಟಿ ಷೋ ಬಂತು. ಕನ್ನಡ ಕಿರುತೆರೆಯಲ್ಲಿ ರಿಯಾಲಿಟಿ ಷೋಗಳ ಅಬ್ಬರ ನೂರಾರು ಪ್ರತಿಭೆಗಳನ್ನು ಅನ್ವೇಷಣೆ ಮಾಡಿದೆ. ಝೀ ಕನ್ನಡ ಸರಿಗಮಪದಲ್ಲಿ ಪುಟಾಣಿಗಳಿಂದ ಹಿಡಿದು ದೊಡ್ಡ ಗಾಯಕರೂ ಬೆಳಕಿಗೆ ಬಂದಿದ್ದಾರೆ.

ಪ್ಯಾಟೆ ಹುಡ್ಗೀರು ಹಳ್ಳಿ ಲೈಫು ಮೂಲಕ ಲೈಮ್‌ಲೈಟ್‌ಗೆ ಬಂದ ಐಶ್ವರ್ಯಾ ಈಗ ಜನಪ್ರಿಯ ನಟಿ. ಇದೇ ಕಾರ್ಯಕ್ರಮದಲ್ಲಿ ಬೆಳಕಿಗೆ ಬಂದು ಬಿಗ್‌ಬಾಸ್–6ರ ಸ್ಪರ್ಧೆಯಲ್ಲಿ ಭಾಗಿಯಾಗಿದ್ದ ನಯನಾ ಕೂಡ ಕಿರುತೆರೆಯಲ್ಲಿ ಜನಪ್ರಿಯ ನಟಿ. ಹಳ್ಳಿ ಹುಡುಗರ ಪ್ಯಾಟೆ ಲೈಫು ಮೂಲಕ ಬೆಳಕಿಗೆ ಬಂದ ಹೆಗ್ಗಡದೇವನಕೋಟೆ ತಾಲ್ಲೂಕಿನ ಅದಿವಾಸಿ ಹುಡುಗ

